# ಹೃದಯದ ಆತಂಕವನ್ನು ಜಯಿಸುವದು

ಮುಷ್ಟಿಯನ್ನು ಬಿಗಿಯಾಗಿ ಹಿಡಿಯಿರಿ. ಈಗ ಅದನ್ನು ದೃಷ್ಟಿಸಿರಿ. ಪ್ರತಿಯೊಬ್ಬನ ಎದೆಗೂಡಿನಲ್ಲಿ 5½ × 3½ × 2½ ಇಂಚಿನ ಅಳತೆಯ ಮುಷ್ಟಿಯಾಕಾರದ ಮಾಂಸದ ಮುದ್ದೆಯು ಅಡಗಿರುತ್ತದೆ. ಇದು ಪುರುಷರಲ್ಲಿ ಹನ್ನೊಂದು ಔನ್ಸ್ (ತೂಕ) ಹೊಂದಿದ್ದರೆ, ಸ್ತ್ರೀಯರ ಹೃದಯವು ಒಂಬತ್ತು ಔನ್ಸ್ ಇರುತ್ತದೆ. ಅದು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. ಅದು ಐದು ಕ್ವಾಟ್ಸ್ ಅಂದರೆ 5. ಲೀಟರಿನಷ್ಟು ರಕ್ತವನ್ನು ದೇಹದ ಇತರ ಭಾಗಗಳಿಗೆ ನಿರಂತರವಾಗಿ ಸರಭರಾಜು ಮಾಡುತ್ತದೆ. ಪ್ರತಿದಿನ 100,000 ಸಾರಿ ಎದೆ ಬಡಿತವನ್ನು ಉಂಟು ಮಾಡುತ್ತದೆ, ಒಬ್ಬನು ನಿದ್ರಿಸಿರಲಿ ಅಥವಾ ನಿದ್ರಿಸದೆ ಇರಲಿ ಈ ಕಾರ್ಯವು ನಿರಂತರವಾಗಿ ನಡೆಯುತ್ತಿರುತ್ತದೆ. ಅದು 100,000 ಲಕ್ಷದ ಮೈಲುಗಳ ಉದ್ದ ನಳಿಕೆಯನ್ನು ಹೊಂದಿದ್ದು ಆಹಾರವನ್ನು ಹಾಗೂ ಆಮ್ಲಜನಕನ್ನು ದೇಹದ ಇತರ ಭಾಗಗಳಿಗೆ ಸರಭ ರಾಜು ಮಾಡಿ ಶರೀರವನ್ನು ಸ್ವಚ್ಛ ವಾಗಿಟ್ಟು ಅದನ್ನು ಆರೋಗ್ಯವನ್ನಾಗಿಯೂ ಮತ್ತು ಚುರುಕಾಗಿಯೂ ಇಡುತ್ತದೆ ಅದು ಎಂದಿಗೂ ವಿಶ್ರಾಂತಿಯನ್ನು ಪಡೆಯುವದಿಲ್ಲ. ಮನುಷ್ಯನು ಹುಟ್ಟುವ ಮೊದಲಿನಿಂದಲೂ ಅವನು ಸಾಯುವವರೆಗೆ ಅವನ ಹೃದಯವನ್ನು ಒಬ್ಬ ವೈದನು ಕಾಳಜಿ ವಹಿಸುವನು, ಹೌದು ದೈಹಿಕವಾಗಿ ಸಂಬಂಧಪಟ್ಟ ಹೃದಯದ ಬಗ್ಗೆ ನಾನು ಮಾತನಾಡುತ್ತಿರುವೆನು.

ದೈಹೀಕವಾದ ಹೃದಯವು ದೇಹಕ್ಕೆ ಹೇಗೆ ಅಗತ್ಯವೋ, ಅದೇ ರೀತಿಯಲ್ಲಿ ಆತ್ಮೀಕವಾದ ಹೃದಯವು, ಕೂಡ ಆತ್ಮೀಕ ಆರೋಗ್ಯಕ್ಕೆ ಅಗತ್ಯವಾಗಿದೆ.[1] ಆತ್ಮೀಕವಾದ ಹೃದಯವು ಅಗೋಚರವಾಗಿದೆ. ಒಂದು ವೇಳೆ ಅದನ್ನು ಮುಷ್ಟಿಯಲ್ಲಿ ಹಿಡಿದಿಡುವುದಾದರೆ ಅದು ಕಣ್ಣಿಗೆ ಗೋಚರವಾಗುವದಿಲ್ಲ. ಅನುಭವಿಯಾದ ಶಸ್ತ್ರ ತಜ್ಞನು ಸಹ ಅದನ್ನು ಯಾವುದೇ ವಿಧವಾದ ಶಸ್ತ್ರ ವೈದ್ಯನ ಚೂರಿಯಿಂದ ಹಿಡಿದಿಡಲಾರನು. ಹೇಗೂ ಧೈಹೀಕವಾದ ಹೃದಯದ ಬಗ್ಗೆ ದೇವರು ಯಾವಾಗಲೂ ಕಾಳಜಿವಹಿಸುವವನಾಗಿದ್ದಾನೆ. ಒಬ್ಬ ವ್ಯಕ್ತಿಯು ಹೃದಯವು ಅವನನ್ನು ನಡಿಸಿದಂತೆ ಅವನು ದೇವರೊಂದಿಗೆ ನಡೆಯುತ್ತಾನೆ.

## ಆತ್ಮೀಕ ಹೃದಯವನ್ನು ಸ್ಪಷ್ಟೀಕರಿಸಲಾಗಿದೆ

ಈ ಹೃದಯವು ದೇವರಿಗೆ ಎಷ್ಟು ಅವಶ್ಯವಾಗಿದೆ? ನನ್ನಲ್ಲಿ ಒಂದು "ಯಂಗ್‌ಸ ಅನಾಲಿಟಿಕಲ್ ಕನ್‌ಕಾರ್ಡೆನ್ಸ್ ಟು ದ ಬೈಬಲ್" ಎಂಬ ಪ್ರತಿಯು ಇರುತ್ತದೆ. ಅದು ಬಹಳಷ್ಟು ಗಾಡಾರ್ಥಗಳನ್ನು ಹೊಂದಿರುವ ಪುಸ್ತಕವಾಗಿದೆ, ಅದರಲ್ಲಿ ಸತ್ಯವೇದದ ಪ್ರತಿ ವಚನಗಳು ಅಕ್ಷರಮಾಲೆಗೆ ಅನುಗುಣವಾಗಿ ಇರುತ್ತದೆ. ಅದು ಒಂದೇ ಪುಟದಲ್ಲಿ ಅನೇಕ ಭಾಗಗಳನ್ನು ಹೊಂದಿರುವದರಿಂದ, ಅದರಲ್ಲಿ ಮುದ್ರಿತವಾಗಿರುವ ಅಕ್ಷರಗಳನ್ನು ಭೂತ ಕನ್ನಡಿಯಿಂದಲೇ ದೃಷ್ಟಿಸಬೇಕಿರುತ್ತದೆ. "ಹೃದಯದ" ಕುರಿತು ಮೂರು ಪೂರ್ಣ ಪುಟಗಳಲ್ಲಿ ವಿವರಣೆಯನ್ನು ನೀಡಲಾಗಿದೆ - ಮತ್ತು ಸುಮಾರು ಒಂದು ಸಾವಿರದಷ್ಟು ವಚನಗಳನ್ನು ವ್ಯಾಖ್ಯಾನಿಸಲಾಗಿದೆ!

ಅದರಲ್ಲಿರುವ ಒಂದು ವ್ಯಾಖ್ಯಾನವನ್ನು ಗಮನಿಸೋಣ, ನಾನು ಹೇಳುವದರ ಕುರಿತು ಅದು ವಿವರಣೆಯನ್ನು ನೀಡುತ್ತದೆ:

> ಆದರೆ ಯೆಹೋವನು ಸಮುವೇಲನಿಗೆ - ನೀನು ಅವನ ಚೆಲುವಿಕೆಯನ್ನೂ ನೀಳವನ್ನೂ ನೋಡಬೇಡ; ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ. ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೆ ನೋಡುವವನಾಗಿದ್ದಾನೆ ಅಂದನು (1 ಸಮುವೇಲ 16:7).

ಇಬ್ರಿಯ ಪದವಾದ "ಚೆಲುವಿಕೆ" ಎಂಬ ಪದವನ್ನು "ಮುಖಭಾವ" ಎಂದು ಅನುವಾದಿಸಲಾಗಿದೆ. "ದೇವರು ಸಮುವೇಲನಿಗೆ ಅವನ ಹೊರಗಿನ ತೋರಿಕೆಯನ್ನು ನೋಡಬಾರದು ಎಂದು ಹೇಳಿದನು." ಮನುಷ್ಯನು ಬಾಹಿರವಾದದ್ದನ್ನು ನೋಡಿ ನಿರ್ಧರಿಸುತ್ತಾನೆ, ಆದರೆ "ದೇವರು ಹೃದಯವನ್ನೇ ನೋಡುವವನಾಗಿದ್ದಾನೆ" - ಇಲ್ಲಿ ದೇವರು ಅಗೋಚರವಾದ, ಮುಟ್ಟಿ ತಿಳಿಯಲಾರದ, ನಮ್ಮ ಅಂತರಾಳವನ್ನೇ ಗಮನಿಸುತ್ತಾನೆ. ನಾವು ಏನನ್ನು ಪ್ರೀತಿಸಿ, ಯಾವದನ್ನು ದ್ವೇಷಿಸುತ್ತೇವೆ ಎಂದು ದೇವರು ಇದರಿಂದ ತಿಳಿಯುತ್ತಾನೆ, ಮತ್ತು ಆಸಕ್ತಿ ನಿರಾಸಕ್ತಿಯನ್ನೂ ಪರಿಗ್ರಹಿಸಿಕೊಳ್ಳುತ್ತಾನೆ, ಇದರಿಂದ ನಮ್ಮ ಯಥಾರ್ಥತೆಯನ್ನು ದೇವರು ಅಳೆಯುತ್ತಾನೆ.

ಆರೋಗ್ಯ ಪೂರ್ಣವಾದ ಹೃದಯಗಳನ್ನು ದೇವರ ವಾಕ್ಯವು ವಿವಿಧ ನಾಮಾಂಕಿತದಿಂದ ಕರೆಯುತ್ತದೆ: ಪ್ರಮಾಣಿಕ ಹೃದಯ, ಶುದ್ಧ ಹೃದಯ, ಅನುಕಂಪದ ಹೃದಯ, ಸ್ತುತಿಗೆ ಯೋಗ್ಯವಾದ ಹೃದಯ, ಸಂತೋಷಕ್ಕೆ ಔಷಧಿಯನ್ನು ನೀಡುವ ಹೃದಯ, ಆನಂದದ ಹೃದಯ ವಿವೇಕದ ಹೃದಯ, ಸಿದ್ಧವಾದ ಹೃದಯ ಈ ಮುಂತಾದವುಗಳೇ. ರೋಗಗ್ರಸ್ತ ಹೃದಯಗಳನ್ನು ಕಠಿಣವಾದ, ಇಬ್ಭಾಗವಾದ, ಅವಿಧೇಯವಾದ, ಮೋಸಕರವಾದ ಮತ್ತು ಹೆಮ್ಮೆಯ ಹೃದಯವೆಂದು ಕರೆಯಲಾಗಿದೆ. ವಿಗ್ರಹ ಆರಾಧಕರನ್ನು ಮೂರ್ತಿಗಳ ಕಡೆಗೆ ತಿರುಗಿ ಕೊಂಡವರು ಎಂದು ಹೇಳಲಾಗಿದೆ. ಈ ವಿಧವಾದ ಹೃದಯವನ್ನು ಕುರುಡು ಹೃದಯ ಎಂದು ಕರೆಯುವರು.

"ಹೃದಯದ" ಕುರಿತ ಈ ಚಿಕ್ಕ ಅಧ್ಯಯನವು, ನಮ್ಮ ಪಾಠವು ಎಷ್ಟು ಪ್ರಮುಖವೆಂದು ತಿಳಿಸುತ್ತದೆ. "ಹೃದಯ" ಎಂಬ ಪದವನ್ನು ಇಬ್ರಿಯ ಭಾಷೆಯಲ್ಲಿ "ಲೇಬಾಬ್" ಎನ್ನುವರು: ಹಳೇ ಒಡಂಬಡಿಕೆಗೆ ಸಂಬಂಧ ಪಟ್ಟ ಈ ಪದವನ್ನು ರೀಬರ್ಟ್ ಗರ್ಡಲ್ ಸ್ಟೋನ್‌ರವರು ಚರ್ಚಿಸಿ:

> ಈ [ಹೃದಯವು] ಭಾವನೆಗಳನ್ನು ಸ್ಪರ್ಶ, ಮಮತೆ, ಮತ್ತು ಆಶೆಗಳನ್ನು ಮಾತ್ರ ಹೊಂದಿರದೆ, ಗುರಿ, ಚಿತ್ತ ನಿಯಮ, ಆಲೋಚನೆ, ಹಾಗೂ ಜ್ಞಾನವನ್ನು ಸಹ ಹೊಂದಿರುತ್ತದೆ. ಅದು ಅಂತರಾಳವನ್ನು ಒಪ್ಪಿಕೊಳ್ಳುತ್ತದೆ, ಆದರೆ ತಲೆಯು ಜ್ಞಾನದ ಕೇಂದ್ರವಾಗಿರುವದಿಲ್ಲ, ಆದರೆ ಹೃದಯವೇ ಪ್ರಮುಖ ಸ್ಥಾನವನ್ನು ಹೊಂದಿರುತ್ತದೆ. ಇದು ಸಕಲ ವಿಧವಾದ ಕ್ರಿಯೆ, ಸ್ಪರ್ಶ, ಹಾಗೂ ಆಲೋಚನೆಗಳಿಗೂ ಮೂಲ ಕೇಂದ್ರವಾಗಿರುವದರಿಂದ, ಅದು ಸಕಲ ವಿಧವಾದ ಪ್ರಭಾವಕ್ಕೆ ಒಳಗಾಗುತ್ತದೆ, ದೇವರ ಹಾಗೂ ಆಂತರಿಕ ಪ್ರಭಾವಕ್ಕೆ ಒಳಗಾಗುತ್ತದೆ.[2]

ಹೊಸ ಒಡಂಬಡಿಕೆಯಲ್ಲಿನ ಅದಕ್ಕೆ ಸಮಾನವಾದ "ಕಾರ್ಡಿಯಾ" ಇದು "ಕಾರ್ಡಿಯಾಲಾಜೀಸ್ಟ್" ಎಂಬದರ ಮೂಲವಾಗಿದೆ. "ಕಾರ್ಡಿಯಾರ್ ಅರೆಸ್ಟ್" ಮತ್ತು "ಕಾರ್ಡಿಯಾಗ್ರಾಮ್" "ಥಿಯಾಲಾಜಿಕಲ್ ಡಿಕ್ಷನರಿ ಆಫ್ ದಿ ನ್ಯೂ ಟೆಸ್ಟ್‌ಮೆಂಟ್" ಎಂಬ ಕಿಟ್ಟಲರ ಒಂಬತ್ತನೇ ಮುದ್ರಣದಲ್ಲಿ "ಕಾರ್ಡಿಯಾ" ಎಂಬುದರ ಅರ್ಥವನ್ನು ಈ ಕೆಳಕಂಡಂತೆ ನೀಡಲಾಗಿದೆ:

> ಹೊಸ ಒಡಂಬಡಿಕೆಯಲ್ಲಿ ತಿಳಿಸಿರುವಂತೆ, ಮನುಷ್ಯನ ಆಂತರಿಕ ಜೀವನದ ಬಲ ಹಾಗೂ ಆತ್ಮ ಹಾಗೂ ಜೀವದ ಮೂಲ ಹೃದಯವೇ ಆಗಿರುತ್ತದೆ. ಅದರಲ್ಲಿ ಸ್ಪರ್ಶ ಹಾಗೂ ಭಾವುಕತೆಯು ಒಳಗೊಂಡಿರುತ್ತದೆ. ಆಶೆ ಮತ್ತು ಆಕಾಂಕ್ಷೆಗಳು, ಸಂತೋಷ, ವೇದನೆ ಹಾಗೂ ದುಃಖಗಳು, ಪ್ರೀತಿ, ಅಭಿಲಾಶೆ ಒಳಗೊಂಡಿರುತ್ತದೆ. ಹೃದಯವು ತಿಳುವಳಿಕೆಯ ಕೇಂದ್ರ ಹಾಗೂ ಆಲೋಚನೆ ಹಾಗು ಪ್ರತಿಬಿಂಬದ ಮೂಲವಾಗಿರುತ್ತದೆ. ಹೃದಯವು ಚಿತ್ತದ ಮೂಲ, ನಿರ್ಣಯದ ಕೇಂದ್ರ ಬಿಂದುವಾಗಿದೆ. ಮಾನವನ ಬಾಹಿರ

> ಕೃತ್ಯಗಳ ಪರಿಣಾಮವನ್ನು, ಕಾರ್ಡಿಯ ನಿರ್ವಹಿಸುತ್ತದೆ. ಮಾನವನ ಈ ಪ್ರಮುಖ ಕೇಂದ್ರವನ್ನು ದೇವರು ತಿರುಗಿಸುತ್ತಾನೆ, ಅದರಲ್ಲಿ ಧಾರ್ಮಿಕ ಬೇರುಗಳು ಅಡಕವಾಗಿವೆ, ಅದು ಮಾನವನ ನೈತಿಕ ಮಟ್ಟವನ್ನು ತೋರುತ್ತದೆ.[3]

ನಿಮ್ಮ ಹೃದಯವು ಮುಂದುವರಿದಂತೆ, ನಿಮ್ಮ ಆಶೆಗಳು ದೇವರಿಗಾಗಿ ಹಾತೋರೆಯುತ್ತದೆ, ಅದು ದೇವರ ಚಿತ್ತಕ್ಕೂ, ಉದ್ದೇಶಕ್ಕೂ ಒಳಗಾಗುತ್ತದೆ. ದೈಹೀಕವಾದ ಹೃದಯದಲ್ಲಿ ಪರಿಣಾಮ ಉಂಟಾದರೆ, ಪೂರ್ಣ ದೇಹವು ವೇದನೆಗೊಳ್ಳುತ್ತದೆ. ಹಾಗೆಯೇ ಆತ್ಮೀಕವಾದ ಹೃದಯವು ಕಠಿಣವಾದರೆ, ಇಬ್ಭಾಗವಾದರೆ, ಮತ್ತು ರೋಗಗ್ರಸ್ತವಾದರೆ, ಅದು ಒಬ್ಬನ ದೇವರೊಂದಿಗಿನ ನಡವಳಿಕೆಯನ್ನು ಬದಲು ಮಾಡುತ್ತದೆ.

ನಿಮ್ಮ ಆತ್ಮೀಕ ಹೃದಯಕ್ಕೆ ಉಂಟಾಗಿರುವ ವೇದನೆಯನ್ನು ಒಬ್ಬ ನುರಿತ ವೈದ್ಯನು ಸಹ ವಿವೇಚಿಸಲಾರನು. ಮನುಷ್ಯನ ಆಂತರ್ಯದ ಹೃದಯವನ್ನು ಅಳತೆ ಮಾಡುವ ಯಾವುದೇ ಸಾಧನವನ್ನು ಮನುಷ್ಯನು ಕಂಡುಹಿಡಿದಿರುವದಿಲ್ಲ. ಯಾರೂ ಸಹ ಮತ್ತೊಬ್ಬನ ಹೃದಯವನ್ನು ತಿಳಿಯಲಾರನು, ಅದರ ಪರಿಸ್ಥಿತಿಯನ್ನು ಅಳತೆ ಮಾಡಲು ದೇವರು ನಮ್ಮದೇ ಆದ ಒಂದು ಸಾಧನವನ್ನು ನೀಡಿರುವನು: ಅದರ ಹೆಸರು ಸತ್ಯವೇದ. ನಾವು ಈ ರೀತಿಯಾಗಿ ಓದುತ್ತೇವೆ:

> ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ (ಇಬ್ರಿಯ 4:12).

ದೇವರು ತನ್ನ ಹರಿತವಾದ ಸಾಧನದಿಂದ "ನಮ್ಮ ಹೃದಯದ ಶಸ್ತ್ರ ಚಿಕಿತ್ಸೆಯನ್ನು" ಪ್ರತೀದಿನ ಮಾಡುತ್ತಾನೆ!

ನಮ್ಮ ಅನಾರೋಗ್ಯದ ಹೃದಯದ ಕುರಿತು ಸತ್ಯವೇದವು ಎತ್ತಿ ತೋರಿಸುವಾಗ, ನಾವು ಅದನ್ನು ತಿರಸ್ಕರಿಸದಂತೆ ಎಚ್ಚರವುಳ್ಳವರಾಗಿರಬೇಕು. ಹೃದಯಘಾತವನ್ನು ಹೊಂದುವ ಜನರು: ಇದು ನನಗೆ ಆಗಿರುವದಿಲ್ಲ ಎಂದು ಹೇಳುವರು ಇದು ಒಂದು ಕೆಟ್ಟ ಆಹಾರದ ನಿಮಿತ್ತ ಆಗಿರಬಹುದು! ನಮ್ಮನ್ನು ದೇವರಿಂದ ದೂರ ಮಾಡಲು ಪ್ರತಿಶಕ್ತಿಯು ನಮ್ಮ ಹೃದಯದಲ್ಲಿ ಕಾರ್ಯ ನಿರ್ವಹಿಸುತ್ತವೆ, ದೇವರಿಂದ ದೂರವಿರುವಂತೆ ಹೃದಯವನ್ನು ಕಠಿಣಮಾಡುತ್ತದೆ. ಈ ಕಾರ್ಯವು ಜರುಗುವಾಗ, ಇದು ನನ್ನಲ್ಲಿ ಸಂಭವಿಸುತ್ತಿಲ್ಲ ಎಂಬ ಮೊದಲ ಕಾರಣವನ್ನು ನೀಡುತ್ತೇವೆ. ಈ ತಿರಸ್ಕಾರದ ಬಗ್ಗೆ ಕೆಲವು ಕ್ಷಣ ಯೋಚಿಸಿರಿ, ಮುಂದೆ ನಾವು ಈ ಕುರಿತ ಎರಡು ವಿಶೇಷವಾದ ವಾಕ್ಯಗಳನ್ನು ನೋಡಲಿದ್ದೇವೆ.

## ಆತ್ಮೀಕ ಹೃದಯವನ್ನು ಕಂಡುಹಿಡಿಯಲಾಗಿದೆ

**ಯೆಶಾಯ 29**

ಮೊದಲನೆಯದಾಗಿ, ಯೆಶಾಯ 29ನ್ನು ನೋಡೋಣ. ಹೃದಯ ಚಿಕಿತ್ಸೆಯ ಪ್ರಥಮ ಹೆಜ್ಜೆಯ ಪಾಠವನ್ನು ನಾವು ಇದರಿಂದ ಕಲಿಯೋಣ. ನಿಮ್ಮ ಹೃದಯದ ಪರಿಸ್ಥಿತಿಯನ್ನು ನಾನು ನಿಮಗೆ ವಿವರಿಸಲು ಸಾಧ್ಯವಿಲ್ಲದಿದ್ದರೂ, ನಿಮ್ಮ ಹೃದಯವನ್ನು ಪರಿಶೀಲಿಸುವದಕ್ಕೆ ಸಹಾಯಕವಾಗುವ ಒಂದು ಸಾಧನವನ್ನು ನಿಮಗೆ ತೋರಿಸುತ್ತೇನೆ ಇದರಿಂದ ನಿಮ್ಮ ಹೃದಯದ ಪರಿಸ್ಥಿತಿಯನ್ನು ನೀವುಗಳೇ ಪರಿಶೀಲಿಸಬಹುದು. ನಿಮ್ಮ ಹೃದಯದ ಆರೋಗ್ಯದ ಬಗ್ಗೆ ನೀವುಗಳೇ ದೇವರಿಗೆ ಯಥಾರ್ಥವಾದ ಉತ್ತರವನ್ನು ನೀಡಬೇಕು.

ಯೆಶಾಯ 29ರಲ್ಲಿ, ಪ್ರವಾದಿಯೂ "ಶಾಪವನ್ನು" ಮುಂತಿಳಿಸಿರುವನು. ಅಧ್ಯಾಯ 28ರಿಂದ 33ರವರೆಗೆ, ಒಂದು ಅಧ್ಯಾಯದಲ್ಲಿ ಮಾತ್ರ "ಅಯ್ಯೊ" ಎಂಬ ಪದದ ಆರಂಭವನ್ನು ಕಾಣುವದಿಲ್ಲ:

> ಅಯ್ಯೋ, ಕುಡುಕರಾದ ಎಫ್ರಾಯಿಮ್ಯರ ಮಹಿಮೆಯ ಕಿರೀಟದ ಗತಿಯೇ! (28:1ಎ).
>
> ಅಯ್ಯೋ, ಅರೀಯೇಲೇ, ಅರೀಯೇಲೇ, ದಾವೀದನು ಸೈನ್ಯ ಸಮೇತನಾಗಿ ವಾಸಿಸಿದ ಪಟ್ಟಣವೇ, ನಿನ್ನ ಗತಿಯನ್ನು ಏನು ಹೇಳಲಿ! (29:1ಎ; ಅರೀಯೇಲೇ ಎಂಬದು ಬಹುಶಃ ಯೆರೂಸಲೇಮಿರಬಹುದು).
>
> ಯೆಹೋವನು ಹೀಗೆ ನಡಿಯುತ್ತಾನೆ: ದ್ರೋಹಿಗಳಾದ [ನನ್ನ] ಮಕ್ಕಳ ಗತಿಯನ್ನು ಏನು ಹೇಳಲಿ! (30:1ಎ).
>
> ಅಯ್ಯೋ, ಸಹಾಯಕ್ಕಾಗಿ ಐಗುಪ್ತವನ್ನು ಸೇರಿ ಅಶ್ವಬಲವನ್ನು ಆಶ್ರಯಿಸುವವರ ಗತಿಯನ್ನು ಏನು ಹೇಳಲಿ! (31:1).
>
> ಇಗೋ, ಒಬ್ಬ ರಾಜನು ನೀತಿಗನುಸಾರವಾಗಿ ಆಳುವನು, ಅಧಿಪತಿಗಳು ನ್ಯಾಯದಿಂದ ದೊರೆತನ ಮಾಡುವರು (32:1).
>
> ಸೂರೆಯಾಗದಿದ್ದರೂ ಸೂರೆಮಾಡಿದಿ, ಬಾಧೆಪಡದಿದ್ದರೂ ಬಾಧಿಸಿದಿ; ನಿನ್ನ ಗತಿಯನ್ನು ಏನು ಹೇಳಲಿ; ನೀನು ಸೂರೆಮಾಡಿ ಬಿಟ್ಟ ಮೇಲೆ ನೀನೂ ಸೂರೆಯಾಗುವಿ; ... (33:1).

ಕಠಿಣ ಹೃದಯಿಗಳಾದ ಇಸ್ರಾಯೇಲ್ಯರಿಗೆ ನಾಶನಕರವಾದ ದಿನದ ಮುಂಚೂಣಿಯನ್ನು ಪ್ರವಾದಿಯಾದ ಯೆಶಾಯನು ಬೊಟ್ಟುಮಾಡಿ ತೋಲಿಸುತ್ತಿದ್ದಾನೆ. "ನಾಶನವು ಹತ್ತಿರ ವಾಗಿರುವದರಿಂದ ಎಚ್ಚರವಾಗಿರಿ!" ಅವನು ಸಮಾಧಾನದಿಂದಲೇ ಬರೆದಿದ್ದರೂ, ಅಲ್ಲಿರುವ ಪ್ರತಿಯೊಂದು "ಅಯ್ಯೊ" ಎಂಬ ಪದಗಳ ಅಂತರದಲ್ಲಿರುವ ಸತ್ಯಾಂಶವನ್ನು ಗಮನಿಸಬಹುದು.

ಅಧ್ಯಾಯ 29ರ ವಚನ 13ರಲ್ಲಿ, ಪ್ರವಾದಿಯ ನುಡಿಗಳು ವೈಯಕ್ತಿಕವಾಗಿವೆ. ಅಲ್ಲಿರುವ ಸತ್ಯಾಂಶವನ್ನು ಅರಿಯುವ ಮೊದಲು, ರೋಗದ ಲಕ್ಷಣಗಳನ್ನು ಗಮನಿಸೋಣ:

(1) *ಮನಸ್ಸಿಲ್ಲದ ಸೇವೆ (ವಚನ 13ಎ, ಸಿ).* "ಮತ್ತು ಯೆಹೋವನು - ಈ ಜನರು ಮಾತಿನಿಂದ ನನ್ನನ್ನು ಸಮೀಪಿಸಿ ತುಟಿಯಿಂದ ನನ್ನನ್ನು ಸನ್ಮಾನಿಸುತ್ತಾರೆ, ಮನಸ್ಸನ್ನೊ ದೂರ ಮಾಡಿಕೊಂಡಿರುವರು" (ವಚನ 13ಎ). ದೇವರು ಹೇಳುತ್ತಿರುವದೇನೆಂದರೆ, ನನ್ನ ಸನ್ನಿಧಿಯಲ್ಲಿ ಅವರು ಮಧುರವಾಗಿ ಮಾತನಾಡುವರು, ನನ್ನನ್ನು ಹೊಗಳುವಾ ಅವರ ಸ್ವರವು ಸರಿಯಾಗಿಯೇ ಇರುತ್ತದೆ ಆದರೆ... ಅದು ಕೇವಲ ಇಸ್ರಾಯೇಲ್ಯರ ಪ್ರಾರ್ಥನೆ ಮಾತ್ರವಾಗಿತ್ತು. ಅಧ್ಯಾಯ 1ರಲ್ಲಿ ಕರ್ತನು, "ನೀವು (ನನ್ನ ಕಡೆಗೆ) ಕೈಯೆತ್ತುವಾಗ ನಿಮ್ಮನ್ನು ನೋಡದಂತೆ ನನ್ನ ಕಣ್ಣುಗಳನ್ನು ಮರೆಮಾಡಿಕೊಳ್ಳುವೆನು; ಹೌದು ನೀವು ಬಹು ಪ್ರಾರ್ಥನೆಗಳನ್ನು ಮಾಡಿದರೂ ನಾನು ಕೇಳೆನು, ನಿಮ್ಮ ಕೈಗಳಲ್ಲಿ ರಕ್ತವು ತುಂಬಿದೆ" (ವಚನ 1:15).

ನಾವೀಗ ಅಧ್ಯಾಯ 29ನ್ನು ಪುನ ನೋಡೋಣ. ವಚನ 13ರಲ್ಲಿ, ಕರ್ತನು "ಬಾಯಿ ಪಾಠವಾಗಿ ಕಲಿತಿರುವ ಮನುಷ್ಯರ ಆಜ್ಞೆ ಎಂದು ಹೇಳಿರುವನು" (ವಚನ 13ಸಿ). ಚಿಕ್ಕವರಾಗಿದ್ದಾಗಿನಿಂದ ಸಭೆಗಳಿಗೆ ಬರುತ್ತಿರುವ ಕ್ರೈಸ್ತರಾದ ನಮ್ಮ ಬಗ್ಗೆಯೇ ಈ ವಾಕ್ಯಭಾಗವು

ಹೇಳುತ್ತಿರುತ್ತದೆ, ಸಂಗೀತಗಳನ್ನು ಬಾಯಿಪಾಠ ಮಾಡಿರುವವರ ಬಗ್ಗೆ, ಸತ್ಯವೇದದ ಮೂಲಕ ನಮ್ಮ ಮಾರ್ಗವನ್ನು ಅರಿತಿರುವವರ ಬಗ್ಗೆ, ಕೆಲವೇ ಕ್ಷಣಗಳಲ್ಲಿ ಪ್ರಾರ್ಥನೆಗಳನ್ನು ಸಿದ್ಧಪಡಿಸಿ ಅನೇಕ ನಿಮಿಷಗಳಕಾಲ ಅದನ್ನು ಮಾಡುವಂಥವರ ಕುರಿತಾಗಿರುತ್ತದೆ. ನಮ್ಮ ಧರ್ಮವು ವೈಯಕ್ತಿಕವಾಗಿದೆಯೇ - ಅಥವಾ "ಬರವಣಿಗೆಯ ಮೂಲಕ ಕಲಿತಿರುವೆವೆ? ಇಸ್ರಾಯೇಲ್ಯರು ತಮ್ಮ ಸಾಂಪ್ರದಾಯಕ ಕ್ರಮದಂತೆ ಮಾಡುತ್ತಿದ್ದರು, ಅದು ಅವರ ಆತ್ಮೀಕ ಪದ್ಧತಿಯಾಗಿತ್ತು."

(2) *ರಹಸ್ಯವಾದ ಪಾಪಗಳು (ವಚನ 15).* ವಚನ 15ರಲ್ಲಿ ರೋಗದ ಇನ್ನೊಂದು ಗುಣ ಲಕ್ಷಣವನ್ನು ಕಾಣುತ್ತೇವೆ: ಯಾರೂ ನೋಡುತ್ತಿಲ್ಲವೆಂದು ತಿಳಿದು ಅವರು ಮಾಡುತ್ತಿದ್ದ ಕಾರ್ಯಗಳನ್ನು ಅವರು ಮಾಡಬಾರದಿತ್ತು. "ತಮ್ಮ ಆಲೋಚನೆಯನ್ನು ಕರ್ತನಿಗೆ ಮರೆಮಾಜುವದಕ್ಕೆ ಅಗಾಧೋಪಾಯ ಮಾಡಿ ನಮ್ಮನ್ನು ಯಾರು ನೋಡಿಯಾರು? ಯಾರು ತಿಳಿದಾರು? ಅಂದುಕೊಂಡು ಕತ್ತಲಲ್ಲೇ ತಮ್ಮ ಕೆಲಸಗಳನ್ನು ನಡಿಸುವವರ ಗತಿಯನ್ನು ಏನು ಹೇಳಲಿ!" ನಾವು ಚಿಕ್ಕವರಿರುವಾಗ, ದುಪ್ಪಟಿಯ ಒಳಗಡೆ ನಾವು ಬೆಳಕನ್ನು ಚಿಮ್ಮಬಾರದೆಂದು ಮತ್ತು "ಅಲ್ಲಿ ಏನನ್ನು ಓದದೆ ನಿದ್ರಿಸಬೇಕೆಂದು" ನಾವು ಮಾಡಿದ ತಂದೇ ತಾಯಿಗಳು ನಮಗೆ ಹೇಳಿರುವದಲ್ಲವೆ, ಆದರೆ ಅದೇ ಕಾರ್ಯಗಳನ್ನು ನಾವುಗಳು ಮಾಡಿ, ತಾಯಿಯರನ್ನು ಮೂರ್ಖರನ್ನಾಗಿಸಿರಲಿಲ್ಲವೇ. ಆದರೆ ತುಂಟತನಗಳನ್ನು ರಹಸ್ಯವಾದ ಪಾಪಗಳನ್ನು ಮಾಡುವಾಗ ದೇವರು ಗಮನಿಸುವದಿಲ್ಲವೆಂದು ಕೆಲವರು ತಿಳಿಯುತ್ತಾರೆ, ಆದರೆ ದೇವರನ್ನು ಯಾರೂ ಸಹ ಮೂರ್ಖನನ್ನಾಗಿ ಮಾಡಿಸಲು ಸಾಧ್ಯವಿಲ್ಲ. ದೇವರು ಸಕಲವನ್ನು ನೋಡುತ್ತಾನೆ; ದೇವರು ಸಕಲವನ್ನು ತಿಳಿದಿದ್ದಾನೆ!

(3) *ಗೊಂದಲಕ್ಕೆ ಕಾರಣಗಳು (ವಚನ 16).* ರೋಗದ ಮೂರನೆಯ ಗುಣವೇನೆಂದರೆ, ಇತರೆ ಎರಡರ ನೈತಿಕವಾದ ಪರಿಣಾಮವೇ ಆಗಿರುತ್ತದೆ: ಅವರ ಆಲೋಚನೆಯ ನಿಮಿತ್ತ ಪರಿಣಾಮಗಳು ಉಂಟಾದವು. ವಚನ 16ರಲ್ಲಿ, "ಅಯ್ಯೋ, ನೀವು ಎಂಥಾ ಮೂರ್ಖರು! ನೀವು ಸಂಗತಿಗಳನ್ನು ಗೊಂದಲಮಯ ಮಾಡುತ್ತಿರುವಿರಿ!" "ನೀವು ಗೊಂದಲ ಗೊಂಡಿದ್ದೀರಿ!" ಎಂದು ಕರ್ತನು ಹೇಳುತ್ತಿರುವನು. ಮುಖ್ಯವಾಗಿ ಅವರು, ದೇವರನ್ನು ಮನುಷ್ಯನು ಎಂದು ತಿಳಿದಿದ್ದರು. ಇದು ಅಸಂಭವವೆ, ಪ್ರವಾದಿ ಹೇಳಿದ್ದೇನೆಂದರೆ, ಕಾರ್ಯವು ಕರ್ತೃವನ್ನು ಕುರಿತು ಅವನು ನನ್ನನ್ನು ಮಾಡಲಿಲ್ಲ ಎಂದುಕೊಂಡಿತೇ: ಮಡಕೆಯು ಕುಂಬಾರನಿಗೆ ಸಮನಾದೀತೆ, ಅದು ತನ್ನ ಕರ್ತೃಗೆ ನನ್ನನ್ನು ಮಾಡಲಿಲ್ಲ ಎಂದುಕೊಂಡೀತೇ? ನಿರ್ಮಿತವಾದದ್ದು ನಿಮಿಸಿದವನಿಗೆ ವಿಷಯ ವಾಗಿ ಅವನಿಗೆ ವಿವೇಕವಲ್ಲ ಎಂದು ಕೊಂಡಿತೇ? ನಿರ್ಮಿತವಾದದ್ದು ನಿರ್ಮಿಸಿದವನ ವಿಷಯವಾಗಿ ಅವನಿಗೆ ವಿವೇಕವಿಲ್ಲ ಎಂದೀತೇ? (ವಚನ 16ಬಿ). ಇಲ್ಲಿ ಕುಂಬಾರನು ನಿರ್ಮಾಣಿಕನಾಗಿದ್ದಾನೆ, ಮತ್ತು ಮಣ್ಣಿನ ಮುದ್ದೆಯು ಅವನ ಕೈಯಲ್ಲಿದ್ದು, ಅವನ ಇಚ್ಛೆಗನುಗುಣವಾಗಿ ನಿರ್ಮಾಣಗೊಳ್ಳಲು ಸಿದ್ಧವಾಗಿದೆ. ಹೇಗೂ ಜನರ ಹೃದಯಗಳು ಕಠಿಣವಾಗುವಾಗ, ದೇವರು ಅವರನ್ನು ಹತೋಟಿಗೆ ತರುವ ಯಾವುದೇ ಹಕ್ಕನ್ನು ಹೊಂದಿರುವದಿಲ್ಲ ಎಂದು ತಿಳಿಯುವರು.

ಈ ರೋಗದ ಗುಣಲಕ್ಷಣಗಳನ್ನು ಗಮನಿಸಿದ ನಂತರ, ವಚನ 13ರ ನಡುವೆ ಇರುವ ರೋಗಪತ್ತೆಯ ಕ್ರಿಯೆಯನ್ನು ನೋಡೋಣ: "*ಮನಸ್ಸನ್ನೋ* ದೂರಮಾಡಿಕೊಂಡಿದ್ದಾರೆ" (ವಚನ 13ಬಿ; ಒತ್ತಿ ಹೇಳಿದ್ದು ನನ್ನದು). ಜನರಲ್ಲಿ ಹೃದಯದ ರೋಗವಿದೆ ಎಂದು ದೇವರು ನುಡಿಯುತ್ತಿದ್ದಾರೆ! ನಿಮಗೆ ಹೃದಯದ ತೊಂದರೆ ಇದ್ದರೆ, ಬಹುಶಃ ಯಾರೂ ಸಹ ಅದನ್ನು ನಿಮಗೆ ತಿಳಿಸಲಾರು, ಪ್ರಶಾಂತ ಪ್ರಾರ್ಥನೆ ಮಾಡುವವರು, ಸುಂದರವಾಗಿ ಹಾಡುವವರು, ತಮ್ಮ ಮಾತುಗಳಿಂದ ನೂರಾರು ಜನರನ್ನು ಸ್ಥಬ್ಧರಾಗಿ ಮಾಡುವವರು ಸಹ, ಈ ಹೃದಯದ ರೋಗಕ್ಕೆ ತುತ್ತಾಗಿರಬಹುದು. ನನಗೆ ದೈಹೀಕವಾದ ಹೃದಯಘಾತವಾಗಿದ್ದರೆ, ಅದನ್ನು ಭೌತಿಕವಾಗಿ ನೋಡಿ, ಅದನ್ನು ನೀನು ಗುರುತಿಸಬಹುದು, ಆದರೆ ನನ್ನನ್ನು ನೇರವಾಗಿ

ನೋಡಿ, ನನಗೆ ಕಠಿಣವಾದ ಹೃದಯವಿದೆ ಎಂದು ಹೇಳಲು ನಿನಗೆ ಸಾಧ್ಯವಿಲ್ಲ ನಾನು ನಿನಗೆ ಮೋಸಮಾಡಬಹುದು; ಆದರೆ ನಾವುಗಳ್ಯಾರೂ ದೇವರನ್ನು ಮೋಸ ಪಡಿಸಲು ಸಾಧ್ಯವಿಲ್ಲ. ಯೆಶಾಯನ ಸಮಯದಲ್ಲಿ ದೇವರು ಇಸ್ರಾಯೇಲ್ಯಜನರ ಹೃದಯದ ಪರಿಸ್ಥಿತಿಯನ್ನು ಗಮನಿಸಿದನು, ಈ ದಿನಗಳಲ್ಲಿರುವ ಜನರೆಲ್ಲರ ಹೃದಯಗಳ ಪರಿಸ್ಥಿತಿಯನ್ನು ಸಹ ಆತನು ಗಮನಿಸುವವನಾಗಿರುತ್ತಾನೆ.

**ಮತ್ತಾಯ 15**

"ಅದು ಹಳೇ ಒಡಂಬಡಿಕೆಗೆ ಮಾತ್ರ ಸೀಮಿತವಾಗಿದೆ ಎಂದು ನೀನು ಹೇಳಬಹುದು ಏಕೆಂದರೆ ಅದು ಯೆಹೂದ್ಯರಿಗೆ ಬರೆಯಲ್ಪಟ್ಟದ್ದು. ಇದು ನಮಗೆ ಹೇಗೆ ಅನ್ವಯಿಸುತ್ತದೆ ಎಂದು ಹೇಳಬಹುದು?" ಈಗ ನಾವು ಹೊಸ ಒಡಂಬಡಿಕೆಗೆ ಹೋಗೋಣ, ಮತ್ತಾಯ 15. ಯೆಶಾಯ 29ನ್ನು ಪ್ರವಾದಿಯ ಬರೆದು ನೂರಾರು ವರ್ಷಗಳು ಕಳೆದ ನಂತರವೂ, ತೋಲಿಕೆಯನ್ನು ತೋರಿ ಹಾಗೂ ಮನೋಹರವಾಗಿ ಮಾತನಾಡುವವರ ಸರಿಯಿಲ್ಲದ ಹೃದಯದ ಬಗ್ಗೆ ವಿವರಿಸುವದು ಯೋಗ್ಯವಾಗಿದೆ. ಯೇಸು ತನ್ನ ಟೀಕಕಾರರಿಂದ ಸದ್ದುಕಾಯರನ್ನು, ಫರಿಸಾಯರನ್ನು ಎದುರಿಸುವಾಗ ಯೆಶಾಯನ ನುಡಿಗಳನ್ನೇ ಉಪಯೋಗಿಸಿದನು.

"ಆಗ ಯೆರೂಸಲೇಮಿನಿಂದ ಫರಿಸಾಯರೂ ಶಾಸ್ತ್ರಿಗಳು ಯೇಸುವಿನ ಬಳಿಗೆ ಬಂದು - ನಿನ್ನ ಶಿಷ್ಯರು ಹಿರಿಯರಿಂದ ಬಂದ ಸಂಪ್ರದಾಯವನ್ನು ಯಾಕೆ ಮೀರುತ್ತಾರೆ? ಅವರು ಕೈ ತೊಳಕೊಳ್ಳದೆ ಆಹಾರ ತೆದುಕೊಳ್ಳುತ್ತಾರಲ್ಲಾ ಎಂದು ಕೇಳಿದರು" (ವಚನಗಳು 1, 2).

ಹೃದಯವನ್ನು ನೋಡದೆ, ಬಾಹಿರವಾದದ್ದನೇ ನೋಡುವ ವಿಚಾರದ ಬಗ್ಗೆ ಒಂದು ಶಾಸ್ತ್ರೀಯ ನಿದರ್ಶನವನ್ನು ಯೇಸು ನೀಡಿದನು:

> ನೀವು ಸಹ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ಆಜ್ಞೆಯನ್ನು ಯಾಕೆ ಮೀರುತ್ತೀರಿ? ಹೇಗಂದರೆ ತಂದೆತಾಯಿಗಳನ್ನು ಸನ್ಮಾನಿಸಬೇಕೆಂತಲೂ ತಂದೆಯನ್ನಾಗಲಿ ತಾಯಿಯನ್ನಾಗಲಿ ದೂಷಿಸುವವನಿಗೆ ಮರಣದಂಡನೆ ಆಗಬೇಕೆಂತಲೂ ದೇವರು ಹೇಳಿದ್ದಾನೆ. ನೀವೋ ಯಾವನಾದರೂ ತನ್ನ ತಂದೆಯನ್ನಾಗಲಿ ತಾಯಿಯನ್ನಾಗಲಿ ನೋಡಿ - ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ದೇವರಿಗಾಗಿ ಇಟ್ಟಿದ್ದೇನೆ ಎಂದು ಹೇಳುವದಾದರೆ ಅವನಿಗೆ ತನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕಾದದ್ದಿಲ್ಲ ಅನ್ನುತ್ತೀರಿ (ವಚನಗಳು 3-6).

"ರದ್ದಾಗಿರುವ" ಎಂಬ ಗ್ರೀಕ್ ಪದವನ್ನು ಕ್ರಿಯಾಪದದಲ್ಲಿ "ಅಧಿಕಾರ" (ಕೂರೋಸ್) ಎನ್ನುವರು.[4] ಆ ಪದದ ಆರಂಭದಲ್ಲಿ "ಅಲ್ಪ" ಎಂಬ ಪದವನ್ನು ಬಳಸಲಾಗಿದೆ, ಆದ್ದರಿಂದ ಯೇಸು, "ನೀವು ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ವಾಕ್ಯವನ್ನು ನಿರರ್ಥಕ ಮಾಡಿದ್ದೀರಿ" ಎಂದು ಹೇಳಿದನು.

ಯೇಸು ಮುಂದುವರಿಸಿ: ಅವರನ್ನು "ಕಪಟಿಗಳೇ" ಎಂದಿರುವನು (ವಚನ 7ಎ)! ಇತ್ತೀಚೆಗೆ ನೀನು ಯಾರಿಗಾದರು, "ಕಪಟಿ" ಎಂದು ಹೇಳಿರುವಿಯಾ? ಪ್ರಾಯಶಃ ನಿಮ್ಮ ಜೀವಿತದಲ್ಲಿ ಇದು ಸಂಭವಿಸದೆ ಇರಬಹುದು, ಒಂದು ವೇಳೆ ಆ ರೀತಿ ಹೇಳುವ ಸಂದರ್ಭ ಉಂಟಾಗಿರಲೂ ಬಹುದು. ನಿಯಮದ ಪ್ರಕಾರ, ಯಾರನ್ನೂ ನಾವು ಕಪಟಿ ಎಂದು ಕರೆಯುವದಿಲ್ಲ, ಯಾಕೆಂದರೆ ಅವರ ಕಪಟತ್ವವನ್ನು ನೀವು ಅರಿತಿರುವದಿಲ್ಲ ಆದರೆ ಯೇಸು ಈ ವಿಷಯವನ್ನು ಅರಿತಿದ್ದನು. ಯೇಸು ತನ್ನ ಟೀಕಾಕಾರರ ಅಂತ ರಾಳವನ್ನು, ಅರಿತು ನಿಮ್ಮ ಸಂಪ್ರದಾಯಗಳನ್ನು ಪಾಲಿಸದವರನ್ನು ಟೀಕಿಸುತ್ತೀರಿ; ನಿಮ್ಮ ಅಂತರಾಳದಲ್ಲಿ ನಿಜವಾದ ದೇವರ ಪ್ರೀತಿ ಇಲ್ಲದವರಾಗಿದ್ದೀರಿ, ನೀವು ಕೊಳೆತ, ಹಾಗೂ ರೋಗಗ್ರಸ್ತ ಹೃದಯವನ್ನು

ಹೊಂದಿದ್ದೀರಿ ಎಂದನು!

ಮತ್ತಾಯ 15:7ಬಿ-9ರಲ್ಲಿ ಯೆಶಾಯ 29ರ ವಚನವನ್ನು ಯೇಸು ವ್ಯಾಖ್ಯಾನಿಸಿರುವನು: ಕಪಟಿಗಳೇ, ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ, "... ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ." ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬದೇ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುತ್ತಾರೆ. ಆ ದೊಡ್ಡ ವೈದ್ಯನು ಅವರನ್ನು ಪರಿಕ್ಷಿಸಿ ಅವರಿಗಿದ್ದ ರೋಗ ವೇನು ಎಂದು ತಿಳಿಸಿದನು: "ಈ ಕುರಿತು ನೀವು ಕಾಳಜಿ ವಹಿಸದೆ ಹೋದರೆ, ನಿಮ್ಮ ಪರಿಸ್ಥಿತಿ ಇನ್ನೂ ಕ್ಷೀಣಿಸುತ್ತದೆ ಎಂದು ತಿಳಿಸಿದನು. ನಿಮಗೆ ಯಾವ ನಿರೀಕ್ಷೆಯೂ ಇರುವದಿಲ್ಲ. ನಿಮಗೆ ಹೃದಯವು ಖಾಲಿಲೆಯಲ್ಲಿರುವದರಿಂದ ಅಘಾತವಾಗುವ ಸಂಭವವಿದೆ ಅಂದನು!"

ಫರಿಸಾಯರ ಕಡೆಯಿಂದ ಯೇಸು ತನ್ನ ದೃಷ್ಟಿಯನ್ನು ಇತರರ ಕಡೆಗೆ ತಿರುಗಿಸಿ, ಕೇಳಿ ಅರ್ಥಮಾಡಿಕೊಳ್ಳಿರಿ ಅಂದನು, "ಬಾಯೊಳಕ್ಕೆ ಹೋಗುವಂಥದು ಮನುಷ್ಯನನ್ನು ಹೊಲೆ ಮಾಡುವದಿಲ್ಲ; ಬಾಯೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆ ಮಾಡುವದು ಎಂದು ಹೇಳಿದನು" (ವಚನಗಳು 10ಬಿ, 11). ಯಾವುದೇ ಪುಸ್ತಕದ ಅಂಗಡಿಗೆ ಹೋದರೂ, ಬಾಯಿಂದ ಒಳಗೆ ಹೋಗುವ ಆಹಾರದ ಬಗ್ಗೆ ಅನೇಕ ಪುಸ್ತಕಗಳನ್ನು ಬರೆಯಲಾಗಿದೆ - ಅಡಿಗೆಯ ಪುಸ್ತಕಗಳು, ಸಮತೋಲನ ಆಹಾರದ ಕುರಿತ ಪುಸ್ತಕಗಳು ಮತ್ತು ಇತರೆ ಪುಸ್ತಕಗಳು ನಿಮಗೆ ದೊರೆಯುತ್ತವೆ - ಆದರೆ ಬಾಯಿಂದ ಒಳಗೆ ಹೊರಡುವಂಥವುಗಳು ಪ್ರಮುಖವೇ ಆದರೆ ಬಾಯಿಂದ ಹೊರಡುವಂಥದ್ದು ಅತಿ ಪ್ರಮುಖವಾಗಿರುತ್ತದೆ - ನಮ್ಮ ಬಾಯಿ ಮಾತುಗಳು, ಹೃದಯದ ಪರಿಸ್ಥಿತಿಯನ್ನು ತೋರುತ್ತದೆ (ಲೂಕ 6:45).

ಯೇಸು ಫರಿಸಾಯರ ಮತ್ತು ಸದ್ದುಕಾಯರ ಅಂತರಾಳವನ್ನು ಇಣುಕಿ ನೋಡಿದ್ದನು, ಆ ನಂತರದಲ್ಲಿ, "ನೀವು ಆರಾಧನೆಯ ಕುರಿತ ಸಮಸ್ಯೆಯನ್ನು ಹೊಂದಿರದೇ ಅಥವಾ ಸೈದ್ಧಾಂತಿಕ ಸಮಸ್ಯೆಯ ನಿಮಗೆ ಇರುವದಿಲ್ಲ, ಆದರೆ ನಿಮಗೆ ಹೃದಯದ ತೊಂದರೆಯಿದೆ ಅಂದನು!"

ಒಂದು ವೇಳೆ ಜನರು ಆರಾಧನೆಗೆ ನಂಬಿಗಸ್ತರಾಗಿ ಸೇರಿ ಬರದೇ ಹೋದರೆ, ಅದು ಹಾಜರಿಯ ಕೊರತೆಯಾಗಿರದೆ, ಬಹುಶಃ ಹೃದಯದ ದೋಷದ ಕಾರಣವಿರಬಹುದು. ನಾವು ಕೊಡಬೇಕಾದದ್ದನ್ನು ಕೊಡದೆ ಹೋದರೆ ಅದು ನನಗೆ ಬೇಸರ ತರುತ್ತದೆ. ಅದು ಸಭೆಯು ಮಾಡಬೇಕಾದ ಕಾರ್ಯಗಳಿಗೆ ಅಡಚಣೆಯಾಗಿರುತ್ತದೆ. ವಾರದಿಂದ ವಾರಕ್ಕೆ ನಮ್ಮ ಕಾಣಿಕೆಯು ಅಲ್ಪವಾಗುತ್ತಾ ಹೋದರೆ, ಅದು ಕೊಡುವದರ ಕುರಿತ ಸಮಸ್ಯೆಯಾಗಿರುವದಿಲ್ಲ, ಇಲ್ಲ ನಾವು ಹೃದಯದ ಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದೇವೆ. ನಾವು ಸರಿಯಾಗಿ ಬೋಧಿಸಿ, ದೀಕ್ಷಾಸ್ನಾನ ಮಾಡಿಸದೆ ಹೋದರೆ ಅದು ನನಗೆ ದುಃಖದ ಸಂಗತಿಯಾಗಿರುತ್ತದೆ. ತಿರಿಗಿ ನಾವು ಆತ್ಮಗಳನ್ನು ಗೆಲ್ಲುವ ವಿಚಾರದಲ್ಲಿ ಮಾತನಾಡದೆ, ಹೃದಯದ ಸಮಸ್ಯೆಯ ಬಗ್ಗೆ ಮಾತನಾಡುತ್ತಿದ್ದೇವೆ.

## ಮುಕ್ತಾಯ

ಯಾವುದೇ ವಿಧದಲ್ಲೂ ನಿಮ್ಮ ಹೃದಯಗಳನ್ನು ನಾನು ನೋಡಲಾರೆ, ಹಾಗೂ ನೀವುಗಳು ಸಹ ನನ್ನ ಹೃದಯವನ್ನು ನೋಡಲಾರಿರಿ. ಅಂತ್ಯದಲ್ಲಿ ಅದು ನಿಮಗೂ ಮತ್ತು ದೇವರಿಗೂ ನಡುವಿನ ಸಂಬಂಧದ ಕುರಿತಾಗಿರುತ್ತದೆ. ನನ್ನ ಹೃದಯವು ಯಾವ ವಿಧವಾದ ಆಕಾರವನ್ನು ಹೊಂದಿರುತ್ತದೆ? ಎಂಬುದನ್ನು ಆಲೋಚಿಸಬೇಕು. ಹೃದಯವನ್ನು ಪರಿಶೀಲಿಸಿಕೊಳ್ಳುವ ಕೆಲವು ಪ್ರಶ್ನೆಗಳಿಂದ ಸಹಾಯವನ್ನು ಪಡೆಯಬಹುದು:

1. ಆರಾಧನೆಯು ರೂಢಿಗಿಂತ ತುಸು ಹೆಚ್ಚಾಗಿದೆಯೇ?

2. ಪ್ರಾರ್ಥನೆಯು ಅರ್ಥವಿಲ್ಲದ ಪದಗಳನ್ನು ನಿರಂತರವಾಗಿ ಹೇಳುವಂತಹ ತುಟಿಗಳ ಸೇವೆಯಾಗಿದೆಯೇ?
3. ದೇವರು ನನ್ನ ಕೊರತೆಗಳನ್ನು ನೀಗಿಸಲು ನನ್ನಿಂದ ದೂರವಾಗಿದ್ದಾನೆಯೇ?
4. ನಾನು ಬಾಹಿರವಾದ ವಿಷಯಗಳಿಗೆ ಆಸಕ್ತಿ ತೋರಿ ಎಲ್ಲದರ ಮೂಲವನ್ನು ಅಸಡ್ಡೆ ಮಾಡಿದ್ದೇನೆಯೇ?
5. ದೇವ ಹಾಗೂ ಆತನ ಅಧಿಕಾರಯುಕ್ತವಾದ ವಾಕ್ಯಗಳಿಗಿಂತ ಹೆಚ್ಚಾಗಿ ನನ್ನನ್ನು ಹೆಮ್ಮೆ ಪಟ್ಟಿದ್ದೇನೆಯೇ?
6. ನನ್ನ ಹೃದಯ ಹಾಗೂ ಜೀವಿತದಲ್ಲಿ ಕೆಟ್ಟತನವನ್ನು ಸಹಿಸಿಕೊಂಡು - ಅದನ್ನು ಅಭ್ಯಾಸ ಮಾಡುತ್ತಿದ್ದೇನೆಯೇ?
7. ನಾನು ಚಿಂತಕನಾಗಿರದೆ ಮುಂದುವರೆಯುತ್ತಿದ್ದೇನೆಯೇ? ನನ್ನ ಹೃದಯದ ಅತಿ ಕಠಿಣವಾಗಿದೆಯೇ?

ಬಲಿದಾಗಿರುವ ಹೃದಯವು ದೇಹದ ಭಾಗಗಳಿಗೆಲ್ಲಾ ರಕ್ತವನ್ನು ಸರಭರಾಜು ಮಾಡುವದರ ಕುರಿತು ಮತ್ತೊಮ್ಮೆ ಯೋಚಿಸು. ದೈಹೀಕ ಜೀವವು ಅದರಲ್ಲಿ ಹುಡುಗಿದೆಯಲ್ಲವೇ. ಸತ್ಯವೇದ ವೆಂಬ ಹೃದಯದ ಕುರಿತು ಈಗ ಊಹಿಸು, ಅದು ನಿನ್ನ ಆತ್ಮೀಕ ಜೀವನದ ಮೂಲವಾಗಿದೆ, ಅದು ಹೃದಯ ರೋಗಕ್ಕೆ ಶಮನವಾಗಿದೆ. ಆತ್ಮೀಕ ಮರಣವು ನಿಶ್ಚಯವಾದದ್ದೇ, ದೇವರ ಸಹಾಯದಿಂದ ಅದಕ್ಕಾಗಿ ನೀನು ಏನನ್ನಾದರೂ ಮಾಡಬೇಕು.

ದೇವರು ನಿನ್ನ ಕಠಿಣವಾದ ಹಾಗೂ ರೋಗಗ್ರಸ್ತವಾದ ಹೃದಯವನ್ನು ಹಿಂದಕ್ಕೆ ಪಡೆದು ಅದಕ್ಕೆ ಪುನರ್ಜಿವ ನೀಡಲಿ. ಕ್ರಿಸ್ತನ ರಕ್ತವು ನಿನ್ನ ಹೃದಯವನ್ನು ಶುದ್ಧಿಮಾಡಿ ಅದನ್ನು ಪುನಃ ನಿರ್ಮಲ ಮಾಡಲಿ. ಹೇಗೂ ನೀನು ಆತನಿಗೆ ಸಮರ್ಪಿಸಿಕೊಂಡರೆ, ಈ ಕಾರ್ಯವು ಉಂಟಾಗುತ್ತದೆ. ನೀನು ನಿನ್ನ ಜೀವಿತವನ್ನು ಸಮರ್ಪಿಸುತ್ತಿಯೋ? ನೀನು ಕ್ರಿಸ್ತನಿಗೆ ದೀಕ್ಷಾಸ್ನಾನ ಹೊಂದದೆ ಹೋಗಿದ್ದರೆ, ಈಗಲೇ ಅದನ್ನು ಮಾಡು (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38)? ನೀನು ಕ್ರಿಸ್ತನಲ್ಲಿ ಪುನರುದ್ಧರಣ ಹೊಂದುವಂತಹ ಅವಶ್ಯಕತೆ ನಿನಗಿದ್ದರೆ, ಇದೇ ಆ ಸಮಯವಾಗಿದೆ (ಅಪೊಸ್ತಲರ ಕೃತ್ಯಗಳು 8:22, 23; ಯಾಕೋಬ 5:16).

---

ಟಿಪ್ಪಣೆಗಳು

[1]ಚಾಲ್ಸ್ ಸ್ಪಿಂಡಾಲ್‌ರವರ ಸಂದೇಶದಿಂದ ಆಯ್ದ ಭಾಗವಾಗಿದೆ. [2]Robert Baker Girdlestone, *Synonyms of the Old Testament* (N.P.: 1897; reproduction, Grand Rapids, Mich.: Wm. B. Eerdmans Publishing Co., n.d.), 65. [3]Johannes Behm, "Kardia," in *Theological Dictionary of the New Testament,* ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1965), 3:611-12. [4]**"ಅಲ್ಪ"** ಎಂಬುದು ಗ್ರೀಕ್ ವರ್ಣಮಾಲೆಯ ಪ್ರಥಮ ಅಕ್ಷರವಾಗಿದೆ. "A" ಸಮಾನವಾಗಿದೆ.